ವಾಸು ಕೋಟೆಬೇಣದಲ್ಲಿರುವ ಕಲ್ಲಿನ ಕಮಾನು ದಾಟಿ ಒಳಗೆ ಕರೆದೊಯ್ದ. ಅದು ನಿಗೂಢ ಸುರಂಗಕ್ಕೆ ಪ್ರವೇಶದ್ವಾರ ಆಗಿತ್ತು. ಸುರಂಗ ಮಿರ್ಜಾನ್ ಕೋಟೆ ನೆಲಮಾಳಿಗೆವರೆಗೂ ಇದೆ ಅಂದ. ಇದ್ದರೂ ಇದ್ದೀತು ಅನಿಸಿತು. ಅಥವಾ ಅವನ ಸುಳ್ಳೂ ಇಷ್ಟವೇ ಆಯಿತು. ಅವನತ್ತ ಅದೇನೋ ಭಯಂಕರ ಸೆಳೆತ. ಕಾಲೇಜಿನಲ್ಲಿ ಹುಡುಗರು ಮಾತ್ರವಲ್ಲ, ಸಿಕ್ರೇಟಾಗಿ ಕೆಲವು ಲೆಕ್ಚರರ್ಸ್ ಕೂಡ ನನ್ನ ಹಿಂದೆ ಬಿದ್ದಿದ್ದರು. ಆದರೆ ನಾನು ವಾಸುಗೆ ಮಳ್ಳುಬಿದ್ದಿದ್ದೆ. ಹುಂಬ ಅಂದರೆ ಹುಂಬ. ಸಿಕ್ಕಾಪಟ್ಟೆ ತೇಜ್ ಧಿಮಾಕು. ಅವನು ಫಾಸ್ಟ್ ಮೋಡಿನಲ್ಲಿದ್ದ. ನನಗೆ ಕೋಟೆಬೇಣ ನಾಟೋರಿಯಸ್ ಪ್ಲೇಸು ಎಂಬುದು ಗೊತ್ತಿತ್ತು. ಆದರೆ ವಾಸು ಕರೆದಾಗ ನಿರಾಕರಿಸಲು ಸಾಧ್ಯವಾಗಲಿಲ್ಲ. ಆ ಆಕರ್ಷಣೆಯೇ ಹಾಗಿತ್ತು. ನಿಷೇಧಿತ ಕೋಟೆಗಳನ್ನು ದಾಟಬಿಟ್ಟೆ...ಆದರೆ ಕೋಟೆಬೇಣದಂಥ ಐತಿಹಾಸಿಕ ತಾಣವು ನನ್ನ ಭವಿಷ್ಯಕ್ಕೆ ಕಲ್ಲಿಡುವ ವರ್ತಮಾನವಾಗುತ್ತದೆ ಎಂಬ ಕಲ್ಪನೆ ಇರಲಿಲ್ಲ!

'ಸುರಂಗದೊಳಗೆ ಅರೆಗತ್ತಲು. ನಿಗೂಢ ತಿರುವುಗಳು. ಕಾಲಕೆಳಗೆ ಹಾವುಗಳು ಹರಿದಾಡುವ ಹೆದರಿಕೆ. ಕತ್ತಲೆಯಲ್ಲಿ ಅವಿತಿರಬಹುದಾದ ಪ್ರಾಣಿಗಳ ಭಯ. ಆದರೆ ಅಂಥ ಭಯದಲ್ಲೂ ಒಂಥರಾ ಥ್ರಿಲ್! ಅವನ ಕೈ ಹಿಡಿದೆ. ಮೈ ಒತ್ತಿಕೊಂಡೆ. ಕಬ್ಬಿಣದಂಥ ಮೈ. ಬೆಂಕಿಯಂಥ ಉಸಿರು. ಅವನ ಮೈ ವಾಸನೆಗೆ ಅದೇನೋ ನಶೆ....ಆದರೂ ಮುಂದೆ ಸಂಭವಿಸುವುದರ ಕಲ್ಪನೆ ಒಂಚೂರೂ ಇರಲಿಲ್ಲ ಮಾರಾಯ...'

ಅವಳ ವಾಕ್ಯಗಳು ಚಿಕ್ಕದಾಗುತ್ತಿದ್ದವು. ಹೊಸಬಣ್ಣನ ಉಸಿರು ಬಿಗಿಯಾಗುತ್ತಿತ್ತು. 'ಹೇ ಹೇ, ಆ ನಮೂನಿ ಉಸಿರು ಕಟ್ಟಿಕೊಳ್ಬೇಡ. ಹೌದು, ನೀನು ಕಥೆಗಾರ. ಆ ಸಂದರ್ಭವನ್ನು ಇನ್ನಷ್ಟು ಚೆಂದಾಗಿ ವರ್ಣಿಸುತ್ತಿದ್ದೆಯೋ ಏನೋ. ನಾನು ನೆಟ್ಟಗೆ ಮುಗಿಸುತ್ತೇನೆ, ತಡಿ...' ಎಂದು ಒಂದು ಗುಟುಕು ನೀರು ಹೀರಿದಳು.

'ಅಂತೂ ಆ ಪುರಾತನ ಸುರಂಗದಲ್ಲಿ ನಾವಿಬ್ಬರೂ ಕೂಡಿದೆವು. ಉತ್ಕಟವಾಗಿ ಪ್ರೇಮಿಸಿದೆವು. ಸುರತದಲ್ಲಿ ಮೈಮರೆತೆವು.

'ಶ್ಯೆ, ಈ ಸುರತ ಗಿರತ ಎಂದರೆ ನೀರಸವಾಗುತ್ತದೆ. ವಾಸುವಿನ ಭಾಷೆಯಲ್ಲೇ ಹೇಳುವುದಾದರೆ ನೆಣೆಹುಲಿ ಆಟ ಆಡಿದೆವು! ಹುಲಿಗಳ ರತಿಕ್ರೀಡೆಯನ್ನು ಹಾಗೆ ಕರೀತಾರಂತೆ ಅಂಕೋಲೆ ಸೀಮೆಯಲ್ಲಿ... ನಿಂಗೂ ಗೊತ್ತಿರಬಹುದು'

ಹೊಸಬಣ್ಣನ ಚಡಪಡಿಕೆ ತೀವ್ರವಾಯಿತು.

'ಕಥೆ ಮುಗೀತು, ಇನ್ನೇನ್ ಬಾಕಿಯಿದೆ, ಅಂತ ತಿಳಿಬೇಡ. ಮುಂದಿನದನ್ನು ಕೇಳು ಕಥೆಗಾರ... ಎಲ್ಲಾ ಮುಗಿಯುವ ಹೊತ್ತಿಗೆ ಕತ್ತಲಿಗೆ ಕಣ್ಣುಗಳು ಹೊಂದಿಕೊಂಡಿದ್ದವು. ಇಬ್ಬರ ನಗ್ನ ಮೈಗಳು ನಿಗಿನಿಗಿ ಕೆಂಡದಂತೆ ಸ್ಫುಟಗೊಂಡಿದ್ದವು. ಅವನು ಪ್ಯಾಂಟ್ ಏರಿಸುವಾಗ ಅದೇನೋ ಕಣ್ ಅಂತ ಕೆಳಗೆ ಬಿತ್ತು. ಫಳಫಳ ಹೊಳೆಯುತ್ತಿತ್ತು. ಎತ್ತಿಕೊಂಡೆ. ಸಟ್ಟನೆ ನಿಗುರಿತು. ಬಟನ್ ಚಾಕು! ಸುರಂಗದಲ್ಲಿ ಇನ್ನಷ್ಟು ಬೆಳಕು ಬೀರಿತು. 'ಇದ್ಯಾಕೆ?' ಅಂದೆ. ನಕ್ಕ. ಸುರಂಗಪೂರ್ತಿ ಅವನ ನಗುವಿನ ಅಲೆ! 'ಅಕಸ್ಮಾತ್ ನೀನು ನೆಣೆಹುಲಿ ಆಟಕ್ಕೆ ಒಪ್ಪದಿದ್ರೆ, ಇರಲಿ ಅಂತ ಇಟ್ಕಂಡಿದ್ದೆ' ಎಂದ. ಅವನ ಚಿರತೆ ಕಣ್ಣುಗಳಲ್ಲಿ ಅಟ್ಟಹಾಸ ಕಾಣುತ್ತಿತ್ತು. ಆ ಗಳಿಗೆಯಲ್ಲಿ ನಂಗೇನಾಯ್ತೋ ಹೇಳಲಾರೆ. ಉಗ್ರ ಕೋಪವಿರಬಹುದು, ಅವಮಾನವಿರಬಹುದು, ಕ್ರೌರ್ಯವೇ ಇರಬಹುದು, 'ಬೋಳಿಮಗನೆ' ಎಂದು ಆ ಚಾಕುವನ್ನು ಅವನ ಕಿಬ್ಬೊಟ್ಟೆಗೆ ಇರಿದೆ...'

ನಾಗರತಿ ಸುಮ್ಮನಾದಳು. ಅಲುಗಾಡಿಸಲು ಆಗದ ಒಂದು ಭಯಂಕರ ಮೌನ ಅಲ್ಲಿತ್ತು. 'ಅಂತೂ ಗೇರಸೊಪ್ಪೆಯ ಕಾಳುಮೆಣಸಿನ ರಾಣಿಯ ಕಥೆಗೋ, ಶಿವಾಜಿ ಕಾಲದ ಘನ ಇತಿಹಾಸಕ್ಕೋ ಸಾಕ್ಷಿಯಾಗಿರುವ ಅಂಕೋಲಿಯ ಕೋಟೆಬೇಣ ನಮ್ಮ ದುರಂತ ಪ್ರೇಮಕ್ಕೂ ಸಾಕ್ಷಿಯಾಯ್ತು' ಎಂದು ಮೌನವಾದಳು.

ಹೊಸಬಣ್ಣ ಹೂಂಗುಡುವುದೂ ನಿಂತಿತ್ತು.

'ತುಂಬಾ ಸೀರಿಯಸ್ ಆಯ್ತು ನಮ್ಮ ಮಾತುಕತೆ. ಒಂದು ತಮಾಷೆ ಕೇಳು. ಒಮ್ಮೊಮ್ಮೆ ನನ್ ಗಂಡ ರಾತ್ರಿ ಹಾಸಿಗೆಗೆ ಕರೆದಾಗ ನಾನು 'ಮೂಡಿಲ್ಲ' ಅಂದರೆ 'ಬಟನ್ ಚಾಕು ತೆಗಿತಿನಿ' ಅಂತಾನೆ. ನಾನು 'ನಿನ್ ಕೈಲಿ ತಲವಾರೂ ವೇಸ್ಟು' ಎಂದು ಕಿಚಾಯಿಸ್ತೇನೆ. ಆ ರಾತ್ರಿ ಅವನು ಪ್ರೇಮಿಸುವ ಪರಿಯೇ ಬೇರೆ..ಹ ಹ ಹಾ...

'ಹೇ, ನ್ಯೂ ಕಲರ್, ಲವ್ ಅಂಡ್ ಹೇಟ್ ಸ್ಪ್ರಿಂಗ್ಸ್ ಫ್ರಮ್ ದಿ ಸೇಮ್ ಸೋರ್ಸ್ ಎಂಬ ಮಾತನ್ನು ನಂತರ ಓದಿದೆ. ಅದು ಸತ್ಯ ಅಲ್ಲವಾ?' ಎಂದಳು.

'ಹೂಂ' ಅಂದ ಹೊಸಬಣ್ಣ. ಅವನ ಧ್ವನಿ